ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ,
ಸೆಕ್ಟರ್ ನಂ:63, ಪ್ಲಾಟ್ ನಂ:110,ನವನಗರ, ಬಾಗಲಕೋಟೆ-03
Tel: 08354/297330, Mob No- 9449877676

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O & M Circle, Sector No:63, Plot No:110, Navanagar, Bagalkot-03
E-mail ID: seebgkt.hescom@gmail.com
dcabgkt.hescom@gmail.com
Corporate Identity Number(CIN): U31401KA2002SGC030437

ಕ್ರಮ ಸಂಖ್ಯೆ :ಬಿಜಿಕೆ/ಅಅ(ವಿ)/ಉಲೆನಿ/ಸಲೆ/ಕಿಸ-1/2023-24/ ದಿನಾಂಕ :

ಪೀಠಿಕೆ :

ದಿನಾಂಕ:24.05.2023 ರಂದು ಮಧ್ಯಾಹ್ನ 12.30 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಿಗೇರಿ, ಅಧೀಕ್ಷಕ ಅಭಿಯಂತರರು(ವಿ), ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟೆ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟೆ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

ಹಾಜರಿದ್ದವರು:1) ಶ್ರೀ ನಾರಾಯಣ ಕಳ್ಳಿಮನಿ, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ.
2) ಶ್ರೀ ಸಿ ವಿ ಶಿವಪೂಜಿ, ಸದಸ್ಯರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ಬಾಗಲಕೋಟೆ
3) ಶ್ರೀ ಅರವಿಂದ ನಾಯಕ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ನಗರ ಉಪವಿಭಾಗ ಹೆಸ್ಕಾಂ, ಬಾಗಲಕೋಟೆ.
4) ಶ್ರೀ. ಸದಾನಂದ ಪಿ. ಶಿರೂರ, ಪ್ಲಾಟ್ ನಂ:56 ಸೆಕ್ಟರ್ ನಂ:69 ಯುನಿಟ್-2, ನವನಗರ ಬಾಗಲಕೋಟೆ ರವರ ಪ್ರತಿನಿಧಿ ಶ್ರೀ ರಂಗನಾಥ ಮ. ಪಾಡಮುಖೆ ನವನಗರ ಬಾಗಲಕೋಟೆ.

ಪ್ರಕರಣ ಸಂಖ್ಯೆ: 02/2023

ಶ್ರೀ. ಸದಾನಂದ ಪಿ. ಶಿರೂರ
ಪ್ರತಿನಿಧಿ: ಶ್ರೀ. ರಂಗನಾಥ ಮ. ಪಾಡಮುಖೆ } ------- ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ನಗರ ಉಪ-ವಿಭಾಗ ಹುವಿಸಕಂನಿ.,
ಬಾಗಲಕೋಟೆ } -------- ಪ್ರತಿವಾದಿ

ವಿಷಯ: "ವಿದ್ಯುತ್ ಸಂಪರ್ಕ ಒದಗಿಸದೇ ಇರುವ" ಕುರಿತು.

*&*&*

ಪ್ರಕರಣ ಸಂಖ್ಯೆ: 02/2023 ರಕ್ಕೆ ಸಂಬಂಧಿಸಿದಂತೆ, ದಿನಾಂಕ:24.05.2023 ರಂದು ಮಧ್ಯಾಹ್ನ 12.30 ಘಂಟೆಗೆ ಶ್ರೀ ಸಿದ್ದಪ್ಪ ಬಿಂಜಿಗೇರಿ, ಅಧೀಕ್ಷಕ ಅಭಿಯಂತರರು(ವಿ), ವಿಜಯಪೂರ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟೆ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ಅಧಿಕಾರಿಗಳು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಶ್ರೀ. ಸದಾನಂದ ಪಿ. ಶಿರೂರ, ಪ್ಲಾಟ್ ನಂ:56 ಸೆಕ್ಟರ್ ನಂ:69 ಯುನಿಟ್-2, ನವನಗರ ಬಾಗಲಕೋಟೆ ರವರ ದಿನಾಂಕ:24-05-2023 ರ ಸಭೆಯ ಹೇಳಿಕೆ :

ವಿದ್ಯುತ್ ಮಂಜೂರಾತಿ ನೀಡಿದ ನಂತರ ನನಗೆ ವಿದ್ಯುತ್ ಸಂಪರ್ಕ ನೀಡಲು ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆದಿರುತ್ತೇರಿ. ಸದರೀ ವಿಷಯವಾಗಿ ಸದರ ವಿದ್ಯುತ್ ಕಾಮಗಾರಿಯ ಮೇಲ್ವಿಚಾರಣೆಯನ್ನು ಹೆಸ್ಕಾಂ ಅಧಿಕಾರಿಗಳಿಂದ ಮಾಡಲಾಗಿರುತ್ತದೆ. ಹಾಗೂ ಈಗಾಗಲೇ ನನ್ನ ಮನೆಗೆ ತಾತ್ಕಾಲಿಕ O.H ವಿದ್ಯುತ್ ಸಂಪರ್ಕ ಸಂಖ್ಯೆ:ಎನ್.ವ್ಹಿ.ಎನ್.ಟಿ-6591 ಒದಗಿಸಿದ್ದು, ಅದನ್ನೇ ಶಾಶ್ವತ ವಿದ್ಯುತ್ ಸಂಪರ್ಕವನ್ನಾಗಿ ಪರಿಗಣಿಸಬೇಕೆಂದು ಗ್ರಾಹಕರು ಮನವಿ ಮಾಡಿರುತ್ತಾರೆ.

ಶ್ರೀ. ಅರವಿಂದ ನಾಯಕ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ನಗರ ಉ ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ದಿನಾಂಕ:24-05-2023 ರ ಸಭೆಯ ಲಿಖಿತ ಹೇಳಿಕೆ:

ಅರ್ಜಿದಾರರಿಗೆ ಸೇವಾ ಮಾರ್ಗವನ್ನು ಅಳವಡಿಸಿಕೊಳ್ಳಲು ಪತ್ರದ ಮುಖೇನ ತಿಳಿಸಲಾಗಿರುತ್ತದೆ. ಆದರೂ ಸಹ ಅರ್ಜಿದಾರರು ಸೇವಾ ಮಾರ್ಗವನ್ನು ಅಳವಡಿಸಿಕೊಳ್ಳದೇ ಸೇವಾ ಮಾರ್ಗ ದೂರದ ಬಗ್ಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಸದರೀ ವಿಷಯವನ್ನು ಬಾಗಲಕೋಟ ಪಟ್ಟಣ ಅಭಿವೃದ್ಧಿ ಪ್ರಾಧಿಕಾರ ರವರ ಗಮನಕ್ಕೆ ತರಲಾಗಿರುತ್ತದೆ. ಅರ್ಜಿದಾರರು ಸೇವಾ ಮಾರ್ಗವನ್ನು ಅಳವಡಿಸಿದ್ದಲ್ಲಿ ವಿದ್ಯುತ್ ಸಂಪರ್ಕ ನೀಡಲು ಕ್ರಮ ಕೈಗೊಳ್ಳಲಾಗುವದೆಂದು ಪತ್ರದಲ್ಲಿ ತಿಳಿಸಿರುತ್ತಾರೆ.

ಸದರಿ ವಾದಿ ಪ್ರತಿವಾದಿಗಳ ಹೇಳಿಕೆಗಳನ್ನು ಆಲಿಸಿ, ಮಾನ್ಯ ವೇದಿಕೆಯು ಈ ಕೆಳಗಿನಂತೆ ಆದೇಶ ನೀಡಲಾಗಿದೆ.

## ಆ ದೇ ಶ

ಕ್ರ.ಸಂ:ಬಿಜಿಕೆ/ಅಇಾ(ವಿ)/ಉಲೆವಿ/ಸಲೆ/ಹಿಸ-1/2022-23/2195-2199 ದಿನಾಂಕ: 09 JUN 2023

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ನಗರ ಉಪವಿಭಾಗ ಹೆಸ್ಕಾಂ, ಬಾಗಲಕೋಟೆ ರವರು ವಿದ್ಯುತ್ ಸಂಪರ್ಕ ಪಡೆಯಲು ನಿಯಮಾನುಸಾರ 30 ಮೀಟರ್ ಫೀಡರ್ ಪಿಲ್ಲರ್ ಬಾಕ್ಸ್ ಇಡಬೇಕಾಗಿದ್ದು, ಸದರೀ ಸೇವಾ ಮಾರ್ಗವು 37 ಮೀಟರ್ ಇರುವದರಿಂದ ಬಿಟಿಡಿಎ ಕಚೇರಿಯಿಂದ ಫೀಡರ್ ಪಿಲ್ಲರ್ ಬಾಕ್ಸ್ ನಿರ್ಮಿಸಿದ ನಂತರ ಪ್ರಥಮ ಆದ್ಯತೆಯಲ್ಲಿ ಸದರೀ ಅರ್ಜಿದಾರರಿಗೆ ಶಾಶ್ವತ ವಿದ್ಯುತ್ ಸಂಪರ್ಕ ನೀಡಲು ಸೂಚಿಸಿ, ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಶ್ರೀ ನಾರಾಯಣ ಕಳ್ಳಿಮನಿ
ಕಾರ್ಯನಿರ್ವಾಹಕ ಅಭಿಯಂತರರು(ವಿ),
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆಯ
ಸದಸ್ಯರು, ಬಾಗಲಕೋಟ.

ಶ್ರೀ ಸಿ ವ್ಹಿ ಶಿವಪೂಜಿ, ಸದಸ್ಯರು,
ಗ್ರಾ.ಕುಂ.ಕೊ.ನಿ.ವೇ, ಬಾಗಲಕೋಟೆ.

ಅಧ್ಯಕ್ಷರು,
(ಸಿದ್ದಪ್ಪ ಬೆಂಜಗೇರಿ,)
ಅಧೀಕ್ಷಕ ಅಭಿಯಂತರರು(ವಿ) ವಿಜಯಪೂರ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟೆ

ಪ್ರತಿಯನ್ನು:

1) ಮುಖ್ಯ ಇಂಜಿನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಮಾಹಿತಿಗಾಗಿ.
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ನಗರ ಉಪ-ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಮಾಹಿತಿಗಾಗಿ.
5) ಶ್ರೀ. ಸದಾನಂದ ಪಿ. ಶಿರೂರ, ಪ್ಲಾಟ್ ನಂ:56 ಸೆಕ್ಟರ್ ನಂ:69 ಯುನಿಟ್-2, ನವನಗರ ಬಾಗಲಕೋಟೆ ರವರ ಪ್ರತಿನಿಧಿ ಶ್ರೀ ರಂಗನಾಥ ಮ. ಪಾಡಮುಖೆ ನವನಗರ ಬಾಗಲಕೋಟೆ.
6) ಕಛೇರಿ ಪ್ರತಿ/ಪ್ರಧಾನ ಕಡತ